**Code No. 10 X(B)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***
1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ತಂದೆ ಮಕ್ಕಳು, ಗಂಡ ಹೆಂಡತಿ, ಅತ್ತೆ ಸೊಸೆ, ಮಾವ ಅಳಿಯ, ಬಂಧು ಮಿತ್ರರ ಮಧ್ಯೆ ಕಾಣುವ ದ್ವೇಷ, ಪ್ರತಿಯೊಬ್ಬರ ಜೀವನದಲ್ಲೂ ಕೆಲವೊಮ್ಮೆ ಕಾಣುವುದು, ಕಾಡುವುದು ಅನಿವಾರ್ಯ ಘಟನೆ. ಇನ್ನು ಕೆಲವು ಅದೃಷ್ಟಹೀನರು ಇದರ ಹೊಡೆತಕ್ಕೆ ಚಿಕ್ಕವಯಸ್ಸಿನಲ್ಲಿಯೇ ಸಿಲುಕಿ ಜೀವನದ ಎಲ್ಲಾ ನರಕ ಯಾತನೆ ಅನುಭವಿಸುತ್ತಾ, ಅಳುತ್ತಾ ಕೊನೆಗೊಂದು ದಿನ ಮರಳಿಬಾರದ ಕಾಣದ ಲೋಕಕ್ಕೆ ತೆರಳುವರು. ಜಗತ್ತು ಸೃಷ್ಟಿ ಆದಾಗಿನಿಂದಲೂ ಕಾಣುತ್ತಿರುವ ದುಃಖಕ್ಕೆ ನಮ್ಮಲ್ಲಿ ಇರುವ ರಾಗ, ದ್ವೇಷ, ಮತ್ಸರ, ಅಹಂಕಾರ ಇಂದ್ರಿಯಗಳಿಗೆ ಗುಲಾಮರಾಗಿರುವುದೇ ಕಾರಣ. ಇಂದ್ರಿಯಗಳನ್ನು ಗೆಲ್ಲದೇ ವಿಶ್ವವನ್ನು ಗೆದ್ದರೂ ಶಾಂತಿಯು ಸಿಕ್ಕದು. ಪ್ರಾಚೀನ ಕಾಲದಿಂದಲೂ ಈ ದುಃಖದ ನಿವಾರಣೆಗಾಗಿ ಹೋಮ, ಯಾಗ, ಯಜ್ಞ ನಿರಂತರವಾಗಿ ಆಚರಿಸುತ್ತಿದ್ದರೂ ನಿರೀಕ್ಷಿಸಿದ ಫಲ ದೊರಕುವುದು ಕೆಲವೊಮ್ಮೆ ಮಾತ್ರ. ಇದಕ್ಕೆ ಕಾರಣ ಕಾಮ ಕ್ರೋಧಗಳೇ ಗೆಲುವಿಗಿರುವ ಅಡೆತಡೆಗಳು ಆಗಿರುತ್ತದೆ.

ಇದನ್ನು ಅರ್ಥೈಸಿಕೊಳ್ಳಲು ಮಹಾಭಾರತ ಘಟನೆಯೊಂದನ್ನು ತಿಳಿಯೋಣ. ಬ್ರಹ್ಮನ ಕೃಪೆಯಿಂದ ರಾಜನಾಗಿದ್ದ ದಕ್ಷಪ್ರಜಾಪತಿಯು ಸುಂದರನು, ಸಮರ್ಥನು ಆಗಿದ್ದನು. ಇವನ ದೌರ್ಬಲ್ಯ ಎಂದರೆ ಅಹಂಕಾರ. ರೂಪವತಿ ಆದ ತನ್ನ ಮಗಳು ಸತೀದೇವಿಯನ್ನು ರುದ್ರ ಅಥವಾ ಶಿವನೊಂದಿಗೆ ವಿವಾಹ ನೆರವೇರಿಸಿದನು. ದೇವರೇ ಅಳಿಯನಾದ ಮೇಲೆ ಅಹಂಕಾರ ಮತ್ತಷ್ಟು ಮೇಲೇರಿತು. ಒಮ್ಮೆ ಮಹರ್ಷಿಗಳು

[ Turn over

ಸತ್ರಯಾಗವನ್ನು ಮಾಡುತ್ತಿದ್ದರು. ಮುಂಚೆಯೇ ಬಂದಿದ್ದ ರುದ್ರನು ಕಾಲು ಚಾಚಿಕೊಂಡು ತನ್ನ ಆಸ್ಥಾನದಲ್ಲಿ ಕುಳಿತುಕೊಂಡನು. ಸ್ವಲ್ಪ ಕಾಲದ ನಂತರ ತಡವಾಗಿ ದಕ್ಷ ಪ್ರಜಾಪತಿ ಬಂದನು. ಎಲ್ಲರೂ ಎದ್ದು ನಿಂತು ಅವರನ್ನು ಗೌರವಿಸಿದರು. ಆದರೆ ಅಳಿಯ ರುದ್ರ ಮಾತ್ರ ಕಾಲು ಚಾಚಿಕೊಂಡು ಕುಳಿತೇ ಇದ್ದನು. ತನಗಿಂತ ವಯಸ್ಸಿನಲ್ಲಿ ಕಿರಿಯವನು ಮತ್ತು ಶಿಷ್ಯನಿಗೆ ಸಮಾನವಾದ ಅಳಿಯ ರುದ್ರನ ನಡುವಳಿಕೆಯಿಂದ ದಕ್ಷನ ದ್ವೇಷ ಹೆಚ್ಚಾಯಿತು. ಕ್ರೋಧ ತನ್ನ ಹೆಡೆ ಎತ್ತಿತ್ತು. ಯಾಗದ ಸ್ಥಳದಲ್ಲಿ ಮಂತ್ರದ ಬದಲು ನಿಂದನೆಗಳು, ಪ್ರತಿನಿಂದನೆಗಳು, ಕೋಪ, ಪ್ರತಿ ಶಾಪಗಳ ಆರ್ಭಟ ಜೋರು ಆಯಿತು. ಮಹರ್ಷಿಗಳ ನಡವಳಿಕೆಯಿಂದ ಶಾಂತವಾಗಿ ಕುಳಿತಿದ್ದ ರುದ್ರನಿಗೆ ಸರಿಕಾಣಲಿಲ್ಲ. ಅವನು ತನ್ನ ಪರಿವಾರದವರೊಡನೆ ಯಾಗದಲ್ಲಿ ಭಾಗವಹಿಸದೆ ಹೊರಟು ಹೋದನು. ಮಾವ ಅಳಿಯರ ದ್ವೇಷ ದಿನದಿನಕ್ಕೂ ಬೆಳೆಯುತ್ತಾ ಹೋಯಿತು.

ಸ್ವಲ್ಪಕಾಲದ ನಂತರ ದಕ್ಷನು ಮಹಾಯಾಗವನ್ನು ಕೈಗೊಂಡನು. ಎಲ್ಲರನ್ನು ಆಹ್ವಾನಿಸಿದ ದಕ್ಷನು ತನ್ನ ಅಳಿಯ ತನ್ನ ದ್ವೇಷಿ, ರುದ್ರ ಮತ್ತು ಆತನ ಪತ್ನಿ ತನ್ನ ಮಗಳಾದ ಸತೀದೇವಿಯನ್ನು ಬನ್ನಿ ಎಂದು ಕರೆಯಲಿಲ್ಲ. ದಕ್ಷಯಜ್ಞ ಪ್ರಾರಂಭವಾಯಿತು. ಭಕ್ತಿಗಿಂತಲೂ ದಕ್ಷನ ಮನಸ್ಸೆಲ್ಲಾ ದ್ವೇಷದಿಂದ ತುಂಬಿತ್ತು. ದಕ್ಷ ಮತ್ತು ರುದ್ರನ ಕಡೆಯವರ ಮಧ್ಯೆ ಪ್ರಾರಂಭವಾದ ನಿಂದನೆಗಳು ಮತ್ತು ಪ್ರತಿನಿಂದನೆಗಳು ಮಾತುಗಳು ಬಹುಬೇಗನೆ ಹಿಂಸಾ ರೂಪ ತಳೆಯುತ್ತದೆ.